ಅ) ಕೃಷಿ ವೆಚ್ಚ ಮತ್ತು ಬೆಲೆ ಆಯೋಗವು ವಿವಿಧ ಬೆಳೆಗಳ ಉತ್ಪಾದನಾ ವೆಚ್ಚದ ಮಾಹಿತಿಯನ್ನು ಎಲ್ಲಾ ರಾಜ್ಯಗಳಿಂದ ಪಡೆದು, ಸೂಕ್ತ ಬೆಂಬಲ ಬೆಲೆಯನ್ನು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡುವುದು. ಈ ಆಯೋಗವು ಕರ್ನಾಟಕ ರಾಜ್ಯಕ್ಕೆ ಸಂಬಂಧಿಸಿದಂತೆ ಪರಿಗಣಿಸಿದ ಉತ್ಪನ್ನ ವೆಚ್ಚದ ಮಾಹಿತಿಯು ಕೃಷಿ ವೆಚ್ಚ ಮತ್ತು ಬೆಲೆ ಆಯೋಗವು ರಾಜ್ಯ ಸರ್ಕಾರಕ್ಕೆ ಒದಗಿಸಿದ ವರದಿಯಲ್ಲಿ ಇರುವುದಿಲ್ಲ.

ಕೃಷ್ಣ ಮೇಲ್ದಂಡೆ ಯೋಜನೆಯ ಮೊದಲ ಹಂತದ ಬಗ್ಗೆ

೩೨೨. ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ಲೋಕೋಪಯೋಗಿ ಕಾಡಾ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೃಷ್ಣಾ ಮೇಲ್ದಂಡೆ ಯೋಜನೆಯ ಮೊದಲ ಹಂತದ ಮೂಲ ಅಂದಾಜು ಮತ್ತು ಖರ್ಚು ಮಾಡಿದ ಹಣ ?

ಆ) ಒಪ್ಪಲಾದ ನಿಯಮಾವಳಿಗಳನ್ನು ಸರ್ಕಾರವು ಪಾಲಿಸದೇ ಇರುವುದರಿಂದ ಎರಡನೇ ಹಂತಕ್ಕೆ ನೆರವು ನೀಡಲು ವಿಶ್ವ ಬ್ಯಾಂಕ್ ನಿರಾಕರಿಸಿರುವುದು ನಿಜವೇ ?

ಇ) ಬಹಳಷ್ಟು ಅವ್ಯವಹಾರದ ಕಾರಣಕ್ಕಾಗಿ ತುಂಡು ಗುತ್ತಿಗೆ ಪದ್ಧತಿಯನ್ನು ಸರ್ಕಾರವು ಆರಂಭಗೊಳಿಸಿರುವುದು ನಿಜವೇ ?

ಈ) ತಪ್ಪು ಅಂದಾಜುಗಳಿಂದಾಗಿ ಯೋಜನೆಯು ವೆಚ್ಚದಲ್ಲಿ ಹೆಚ್ಚಳವಾಗಿರುವುದು ನಿಜವಲ್ಲವೇ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ, ಕಾಡಾ ಮತ್ತು ನೀರಾವರಿ ಮಂತ್ರಿಗಳು).—

ಅ) ೧೯೭೮ ರಲ್ಲಿ ವಿಶ್ವ ಬ್ಯಾಂಕ್ ನೆರವಿಗೆ ಮುಂದೊಡ್ಡಲಾದ ಕರ್ನಾಟಕ ನೀರಾವರಿ ಯೋಜನೆಯಲ್ಲಿ ಆಳವಡಿಸಲಾದಂತೆ, ಕೃಷ್ಣಾ ಮೇಲ್ದಂಡೆ ಯೋಜನೆಯ ಮೊದಲ ಘಟದ ಮೊದಲ ಹಂತದ ಅಂದಾಜು ವೆಚ್ಚ ೧೯೯.೯೩ ಕೋಟಿ ರೂಪಾಯಿಗಳು. ೧೯೭೮ ರಿಂದ ೧೯೮೬ರ ವರೆಗಿನ ವಿಶ್ವ ಬ್ಯಾಂಕ್ ನೆರವಿನ ಅವಧಿಯಲ್ಲಿ ಮೊದಲ ಹಂತಕ್ಕೆ ಆದ ಖರ್ಚು ರೂ. ೩೩೪.೭೪ ಕೋಟಿ.

ಆ) ಎರಡನೇ ಹಂತದ ಯೋಜನೆಯು ಕೇಂದ್ರ ಸರ್ಕಾರದಿಂದ ಅಂಗೀಕಾರ ಪಡೆದಿದ್ದು ವಿಶ್ವ ಬ್ಯಾಂಕ್ ನಿಯೋಗದವರು ಈಗಾಗಲೇ ಹಲವಾರು ಬಾರಿ ರಾಜ್ಯಕ್ಕೆ ಭೇಟಿ ಕೊಟ್ಟು ಮಾತುಕತೆಗಳನ್ನು ನಡೆಸಿದ್ದಾರೆ. ಇನ್ನು ೪-೫ ತಿಂಗಳಲ್ಲಿ ವಿಶ್ವಬ್ಯಾಂಕ್‌ನಿಂದ ಯೋಜನೆಯ ಅಪ್ರೈಸಲ್ ನಡೆಯುವ ನಿರೀಕ್ಷೆ ಇದೆ.

ಇ) ಇಲ್ಲ.

ಈ) ಯೋಜನೆಯ ಅವಧಿಯಲ್ಲಿ ಆದ ದರಗಳ ಹೆಚ್ಚಳ, ನಿರ್ಮಾಣ ಕಾಲದಲ್ಲಿ ಆದ ಕೆಲವು ವಿನ್ಯಾಸಗಳಲ್ಲಿ ಬದಲಾವಣೆ, ಇತ್ಯಾದಿ ಕಾರಣಗಳಿಂದಾಗಿ ಯೋಜನಾ ವೆಚ್ಚದಲ್ಲಿ ಹೆಚ್ಚಳವಾಗಿದೆ.

ಗುಲ್ಬರ್ಗಾ ತಾಲ್ಲೂಕು ಹಾಗರಗುಂಡಗಿ ಕೆರೆಯ ಬಗ್ಗೆ

೩೭೨. ಶ್ರೀ ಕೆ. ಬಿ. ಶಾಣಪ್ಪ (ಶಹಾಬಾದ್).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಗುಲ್ಬರ್ಗಾ ತಾಲ್ಲೂಕು ಹಾಗರಗುಂಡಗಿ ಕೆರೆಯನ್ನು ಕಟ್ಟಲಾಂ ಯಾವಾಗ ಪ್ರಾರಂಭ ಮಾಡಲಾಯಿತು ?

ಆ) ಸದರೀ ಕೆರೆಯ ಕಾಮಗಾರಿ ಕೆಲಸಕ್ಕೆ ಮೊದಲು ಅಂದಾಜು ಮಾಡಿದ ಹಣವೆಷ್ಟು? ಮತ್ತು ಕೆಲಸ ಪೂರ್ಣಗೊಂಡಿದೆಯೇ ?

ಇ) ಹಾಗಿದ್ದಲ್ಲಿ, ಸದರೀ ಕೆರೆಯಿಂದ ಎಷ್ಟು ಕರೆ ಜಮೀನು ನೀರಾವರಿ ಆಗುತ್ತಿದೆ ?